**Code No. 10 X(C)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರಥಮ ದರ್ಜೆ – ಪ್ರಥಮ ಪತ್ರಿಕೆ

ಜೂನ್, 2016

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಇಂದು ಜಗತ್ತಿನಲ್ಲಿ ಹಣ ಮತ್ತು ಅದರಿಂದ ಪಡೆಯಬಹುದಾದ ವಸ್ತುಗಳು ಇವುಗಳಿಗೆ ಬೆಲೆ. ಇವುಗಳನ್ನು ನಿರ್ಮಾಣ ಮಾಡಿರುವವನು ಮನುಷ್ಯ. ಆದರೆ ಈ ಮನುಷ್ಯನೇ ಇಂದು ತನ್ನ ಮೌಲ್ಯಗಳನ್ನು ಮರೆತು ಕುಳಿತ್ತಿದ್ದಾನೆ. ಇನ್ನೂ ಸೋಜಿಗದ ಸಂಗತಿಯೆಂದರೆ, ಈ ಮನುಷ್ಯ, ಆ ಹಣ ಇವೆಲ್ಲಾ ಒಂದು ಅವಧಿಯಲ್ಲಿ ಕಾಣಿಸಿಕೊಂಡು ಕಣ್ಮರೆ ಆಗುವಂತಹ ಈ ಅವಧಿಗೆ ಸಮಯ ಎಂದು ಹೆಸರು. ಸಮಯ ಮಹತ್ವಪೂರ್ಣವಾದುದು ಎಂಬುದನ್ನು ಆಲೋಚಿಸಿ ನೋಡಬೇಕು ಆಗ ತಿಳಿಯುತ್ತದೆ ಸಮಯವೇ ಸಂಪತ್ತು ಎಂದು. ಸಮಯವನ್ನು ಸದುಪಯೋಗಪಡಿಸಿಕೊಂಡು ಮನುಷ್ಯ ಏನನ್ನು ಬೇಕಾದರೂ ಪಡೆಯಬಹುದು. ಸಮಯವನ್ನು ಸದುಪಯೋಗಪಡಿಸಿಕೊಳ್ಳುವವರಿಗೆ ಕೆಲವು ಸಲಹೆಗಳುಂಟು. ಸಮಯ ಅತ್ಯಂತ ಮಹತ್ವ ಪೂರ್ಣವಾದುದು ಎಂಬ ಅರಿವಿರಲಿ, ಕಳೆದು ಹೋದ ಕಾಲ ಮರಳಿ ಬಾರದು ಎಂಬ ಕಟುಸತ್ಯ ತಿಳಿದಿರಲಿ. ಯಾವ ಯಾವ ಸಮಯದಲ್ಲಿ ಏನೇನನ್ನು ಮಾಡಬೇಕೆಂದು ಅದನ್ನು ಮಾಡಿಯೇ ತೀರುತ್ತೇನೆ ಎಂಬ ದೃಢತೆಯಿರಲಿ, ಕೈಗೊಳ್ಳುವಂತಹ ಪುಟ್ಟ ಕಾರ್ಯದಲ್ಲೂ ಸ್ಪಷ್ಟ ಕಲ್ಪನೆಯಿರಲಿ. ಯಾವುದೇ ಕಾರ್ಯವನ್ನು ಉತ್ಸಾಹದಿಂದಲೂ ಎಚ್ಚರಿಕೆಯಿಂದಲೂ ಮಾಡದಿದ್ದರೆ ಸಮಯ ನಷ್ಟವಾಗುತ್ತದೆ ಎಂಬ ಸೂಕ್ಷ್ಮ ತಿಳಿದಿರಲಿ.

ಸಮಯವು ಹಣಕ್ಕಿಂತಲೂ ಶ್ರೇಷ್ಠ ಎನ್ನುವರು ಉಂಟು, ಆಲೋಚಿಸಿ ನೋಡಿದರಂ ಎರಡೂ ಶ್ರೇಷ್ಠ. ಸಮಯವನ್ನು ಸದುಪಯೋಗಪಡಿಸಿಕೊಂಡರೆ ಹಣ ಗಳಿಸಬಹುದು.

[ Turn over

ಹಣವನ್ನು ಸದುಪಯೋಗಪಡಿಸಿಕೊಂಡರೆ ಸಮಯ ಉಳಿಸಬಹುದು, ಆದರೆ ಸದುಪಯೋಗಪಡಿಸಿಕೊಳ್ಳುವಂತಹ ಬುದ್ಧಿಯಿರಬೇಕು ಅಷ್ಟೇ. ಒಂದೇ ಸಮನೆ ಹರಟೆ ಹೊಡೆಯುವವರ ಸಮಯ ನಿರರ್ಥಕ, ಉಪಯುಕ್ತವಾದ ಮಾತುಕತೆಗಳಲ್ಲಿ ತೊಡಗುವವರ ಸಮಯ ಸಾರ್ಥಕವಾದುದು. ಹಗಲುಗನಸು ಕಾಣುತ್ತಾ ಆಶಾ ಗೋಪುರಗಳನ್ನು ಕಟ್ಟುವವರ ಸಮಯ ನಿರರ್ಥಕವಾದುದು, ಸದ್ಭಾವನೆಗಳನ್ನು ತಾಳುತ್ತಾ ಸುಸಂಬದ್ಧವಾಗಿ ಆಲೋಚಿಸುವವರ ಸಮಯ ಸಾರ್ಥಕವಾದುದು. ಹಣ ಕಳೆದುಹೋದರೆ ಬಾಯಿ ಬಡಿದುಕೊಳ್ಳುವವರೇ ಎಲ್ಲಾ, ಸಮಯ ನಷ್ಟವಾಯಿತೆಂದು ದುಃಖಿಸುವವನು ಸಾವಿರಕ್ಕೆ ಒಬ್ಬನೂ ಇಲ್ಲ. ಸಮಯ ಬೇಕೆಂಬುವವರು ತಾವು ಮಾಡುವ ಪ್ರತಿಯೊಂದು ಕೆಲಸವನ್ನು ಬೇಗ ಮಾಡಿ ಮುಗಿಸಲೆತ್ನಿಸಿ ಸಮಯ ಉಳಿಸಬೇಕು. ಹೀಗೆ ಸಮಯದ ಬಗೆಗೆ ನಾವು ಅನೇಕ ಅಂಶಗಳನ್ನು ತಿಳಿಯಬಹುದು.

ವಿದ್ಯಾರ್ಥಿಗಳ ವಿಷಯದಲ್ಲಿ ಹೇಳುವುದಾದರೆ ಅವರ ಸಮಯ ವ್ಯರ್ಥವಾಗುವ ಸಂದರ್ಭಗಳೇ ಬಹಳವಾಗಿವೆ. ಅನಿರೀಕ್ಷಿತವಾಗಿ ಮತ್ತೆ ಮತ್ತೆ ದೊರಕುವ ಬಿಡುವಿನ ವೇಳೆಯನ್ನು ಮಿಂಚಿನಂತೆ ತಲೆಯೋಡಿಸಿ ಸದುಪಯೋಗಪಡಿಸಿಕೊಳ್ಳಲು ವಿದ್ಯಾರ್ಥಿಗಳು ಸಿದ್ಧರಾಗಿರಬೇಕಾಗುತ್ತದೆ. ಸಮಯವನ್ನು ವ್ಯರ್ಥವಾಗಿ ಕಳೆಯಲೇಬೇಕಾದ ಸಂದರ್ಭಗಳಲ್ಲಿ ಅದನ್ನು ಸದುಪಯೋಗಪಡಿಸಿಕೊಳ್ಳಲು ಕೆಲವು ಸಲಹೆಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ, ಆದರೆ ಅವರವರೇ ಬುದ್ಧಿ ಉಪಯೋಗಿಸಿಕೊಂಡು ಇನ್ನೂ ಹಲವು ಉಪಾಯಗಳನ್ನು ಕಂಡುಕೊಳ್ಳಬೇಕು. ಸುಮ್ಮನೆ ಸೋರಿ ಹೋಗುವ ಸಮಯದ ಬಗ್ಗೆ ಒಂದು ಅರಿವನ್ನು ಮೂಡಿಸುವ ಪ್ರಯತ್ನ ನನ್ನದು ಅಷ್ಟೇ.